1 ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1940

2 ಸದಸ್ಯರ ಹೆಸರು ; ಶ್ರೀ ಸಿ.ಎಸ್.ಪುಟ್ಟೇಗೌಡ (ಶ್ರವಣಬೆಳಗೊಳ)

3 ವಿಷಯ : ರೇಷ್ಮೇ ಕೈಗಾರಿಕಾ ನಿಗಮದಲ್ಲಿನ ಅವ್ಯವಹಾರದ ಬಗ್ಗೆ

4 ಉತ್ತರಿಸುವವರು : ಶ್ರೀ ಸಿ. ಚೆನ್ನಿಗಪ್ಪ, ರೇಷ್ಮೆ ಸಚಿವರು

ಕ್ರ.ಸಂ. ಪ್ರಶ್ನೆ

ಅ ಕರ್ನಾಟಕ ರೇಷ್ಮೇ ಕೈಗಾರಿಕಾ ನಿಗಮದಲ್ಲಿ 2001ರ ಜೂನ್‌ನಿಂದ 2003ರ ಸೆಪ್ಟೆಂಬರ್ ಅವಧಿಯಲ್ಲಿ ಭಾರಿ ಅವ್ಯವಹಾರ ನಡೆದಿರುವುದು ನಿಜವೇ?

ಉತ್ತರ

ಹೌದು

ಕ್ರ.ಸಂ. ಪ್ರಶ್ನೆ

ಆ. ಹಾಗಿದ್ದಲ್ಲಿ ಭ್ರಷ್ಟಚಾರದಲ್ಲಿ ಭಾಗಿಯಾಗಿರುವ ಹಿರಿಯ ಅಧಿಕಾರಿಗಳು ಯಾರು?

ಉತ್ತರ

ಹಿಂದಿನ ವ್ಯವಸ್ಥಾಪಕರ ನಿರ್ದೇಶಕರು. ವ್ಯವಸ್ಥಾಪಕರು (ಹಣ ಮತ್ತು ಲೆಕ್ಕ). ಉಪ ವ್ಯವಸ್ಥಾಪಕರು (ಆಂತರಿಕ ಲೆಕ್ಕ). ಮಾರಾಟ ವ್ಯವಸ್ಥಾಪಕರ ವಿರುದ್ಧ ಈ ಆರೋಪಗಳನ್ನು ಮಾಡಲಾಗಿದೆ.

ಕ್ರ.ಸಂ. ಪ್ರಶ್ನೆ

ಇ. ತಪ್ಪಿಸ್ಥರ ವಿರುದ್ಧ ಕೈಗೊಂಡಿರುವ ಕ್ರಮಗಳೇನು

ಉತ್ತರ

ವ್ಯವಸ್ಥಾಪಕರು (ಹಣ ಮತ್ತು ಲೆಕ್ಕ) ಇವರನ್ನು ಸೇವೆಯಿಂದ ತೆಗೆದುಹಾಕಲಾಗಿದೆ. ಉಪ ವ್ಯವಸ್ಥಾಪಕರು (ಆಂತರಿಕ ಲೆಕ್ಕ) ಮತ್ತು ಮಾರಾಟ ವ್ಯವಸ್ಥಾಪಕರು. ಇವರಿಗೆ ವಾಗ್ದಂಡನೆ ನೀಡಲಾಗಿದೆ. ಹಿಂದಿನ ವ್ಯವಸ್ಥಾಪಕ ನಿರ್ದೇಶಕರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಲಾಗಿದೆ.

ಕ್ರ.ಸಂ. ಪ್ರಶ್ನೆ

ಈ. ಸಿ.ಒ.ಡಿ ತನಿಖೆಗೆ ಒಪ್ಪಿಸಲಾಗಿದೆಯೇ ಇಲ್ಲ

ಕ್ರ.ಸಂ. ಪ್ರಶ್ನೆ

ಉ. ನಿಗಮದಲ್ಲಿ ದಾಖಲೆ ನಾಶವಾಗಿರುವ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವುದು ನಿಜವೆ? ಹಾಗಿದ್ದಲ್ಲಿ ಅದರ ವಿವರಗಳೇನು

ಉತ್ತರ

ಇಲ್ಲ

ಕ್ರ.ಸಂ. ಪ್ರಶ್ನೆ

ಊ. ಸದರಿ ನಿಗಮದ 2001ರಿಂದ 2003ರವರೆಗಿನ ಲೆಕ್ಕ ಪರಿಶೀಲನಾ ವರದಿಗಳಲ್ಲಿ ಅವ್ಯವಹಾರ ನಡೆದಿರುವುದರ ವಿವರ ನೀಡುವುದು.

ಉತ್ತರ

ಕಂಪನಿಯ ಆಂತರಿಕ ಲೆಕ್ಕ ಪರಿಶೋಧನೆಯಲ್ಲಿ ಈ ಕೆಳಕಂಡ ಅವ್ಯವಹಾರಗಳು ನಡೆದಿರುವುದು ಗಮನಕ್ಕೆ ಬಂದಿದೆ.

ಅ) ವಾಸ್ತವಿಕವಾಗಿ ಪ್ರಯಾಣ ಮಾಡದೇ ಇದ್ದರೂ ಸಹ ಸುಳ್ಳು ದಾಖಲೆ ಹಾಗೂ ವಿಮಾನಯಾನ ಪ್ರಯಾಣ ವೆಚ್ಚಗಳನ್ನು ಕ್ಲೇಮ್ ಮಾಡಿರುವುದು.

ಆ) ಪ್ರಯಾಣ ಭತ್ಯೆ ಪಡೆಯುವ ಉದ್ದೇಶದಿಂದ ಹೋಟೆಲ್‌ಗಳಿಂದ ಖಾಲಿ ಬಿಲ್ಲುಗಳನ್ನು ಪಡೆದು. ಅವುಗಳನ್ನು ಕಛೇರಿಯಲ್ಲಿ ಬೆರಳಚ್ಚು ಮಾಡಿಸಿರುವುದು.

ಇ). ಬಹಳಷ್ಟು ಸೀರೆಗಳನ್ನು ಕಾಣಿಕೆಯಾಗಿ ನೀಡಿರುವುದು.

ಶ್ರೀ ಸಿ ಎಸ್ ಪುಟ್ಟೇಗೌಡ : ಅಧ್ಯಕ್ಷರೇ ಇದರಲ್ಲಿ ಅವ್ಯವಹಾರ ನಡೆದಿದೆ ಎಂದು ಸೂಕ್ಷ್ಮವಾಗಿ ಹೇಳಿದ್ದರೂ ಕೂಡ ಇದನ್ನು ಎಸಗಿರುವ ಅಧಿಕಾರಿ ಯಾರು? ಯಾವ ಮಟ್ಟದವರು? ಪ್ರಥಮದರ್ಜೆ ಗುಮಾಸ್ತರಾ ಅಥವಾ ಮ್ಯಾನೇಜರಾ? ಎಷ್ಟು ದುರ್ವ್ಯವಹಾರ ಮಾಡಿದ್ದಾರೆ? ಅದೇನೂ ರೇಷ್ಮೇ ಸೀರೆಯನ್ನು ತಗೊಂಡು ಯಾರಿಗೋ ಕಾಣಿಕೆ ಕೊಟ್ಟಿದ್ದಾರೆ ಅಂತೀರಾ. ಆ ಗಿಫ್ಟ್ ಯಾರಿಗೆ ಕೊಟ್ಟರು. ಹಣ ಎಷ್ಟು? ದಯಮಾಡಿ ಅದನ್ನು ಸ್ಪಷ್ಟವಾಗಿ ತಿಳಿಸಬೇಕು. ನೀವು ರೈತರ ಮಕ್ಕಳು ಅಂತ ಸರ್ಕಾರ ನಿಮಗೆ ಈ ಖಾತೆ ಕೊಟ್ಟು ನೂರು ಕೋಟಿಯಿಂದ 30 ಕೋಟಿ ದುಡ್ಡು ಕೊಟ್ಟು ಇಂತಹ ಅಧಿಕಾರಿಗಳನ್ನೆಲ್ಲ ಇಟ್ಟುಕೊಂಡರೆ ನೀವೇನು ಈ ಖಾತೆಯನ್ನು ಬಡ ರೈತರ ಪರವಾಗಿ ಇಟ್ಟುಕೊಂಡಿದ್ದೀರೋ ದುರ್‌ವ್ಯವಹಾರ ಭ್ರಷ್ಟಾಚಾರ ಮಾಡುವುದಕ್ಕಾಗಿ ಇಟ್ಟುಕೊಂಡಿದ್ದೀರೋ ಸ್ಪಷ್ಟವಾಗಿ ಹೇಳಬೇಕು. ಇದನ್ನು ಏನಾದರೂ

ಸರಿ ಮಾಡಲು ಆಗದೇ ಇದ್ದರೆ ಇಲಾಖೆಯನ್ನು ಮುಚ್ಚಿಡುವುದು ಒಳ್ಳೆಯದು. ರೈತರ ಪರವಾಗಿ ಯಾರೋ ಅಧಿಕಾರಿಗಳು ತಿನ್ನುವುದಕ್ಕೆ ಬಿಡಬಾರದು ಇದನ್ನು.

ಶ್ರೀ ಎ. ಟಿ. ರಾಮಸ್ವಾಮಿ : ಅಧ್ಯಕ್ಷರೆ, ವಿಮಾನಯಾನ ಮಾಡದೇ ಇದ್ದರೂ ವಿಮಾನಯಾನ ಮಾಡಿದ್ದೇನೆ. ಹೋಟೆಲಲ್ಲಿಲ್ಲದೆ ಹೋಟೆಲಲ್ಲಿದ್ದೆ ಎಂದು ಸುಳ್ಳು ದಾಖಲೆ ಸೃಷ್ಟಿ ಮಾಡಿ ಹಣ ಪಡೆದಿರುವವರು ಒಬ್ಬ ಸಾಮಾನ್ಯ ನೌಕರನಲ್ಲ. ನನಗೆ ತಿಳಿದ ಮಟ್ಟಿಗೆ ಆ ನಿಗಮದ ವ್ಯವಸ್ಥಾಪಕ ನಿರ್ದೇಶಕರು. ಅವರ ಕೆಳಗಿನ ಅಧಿಕಾರಿಯನ್ನು ಡಿಸ್ಮಿಸ್ ಮಾಡಿಬಿಟ್ಟಿರಿ. ಯಾರು ಸುಳ್ಳು ದಾಖಲೆ ಸೃಷ್ಟಿ ಮಾಡಿ ವಿಮಾನಯಾನ ಮಾಡದೇ ಇದ್ದರೂ ಮಾಡಿದ್ದೇನೆ ಅಂತ ಹೇಳಿ. ಹೋಟೆಲ್ಲಿನಲ್ಲಿದ್ದೇನೆ ಲಾಡ್ಜನಲ್ಲಿದ್ದೆ ಅಂತ ದಾಖಲೆ ಕೊಟ್ಟ ಹಣ ಡ್ರಾ ಮಾಡಿಕೊಂಡರೋ ಆ ಎಂ.ಡಿ.ಯನ್ನು ನೀವೇನೂ ಮಾಡಲಿಲ್ಲ. ಇದರಲ್ಲಿ ಗಂಭೀರವಾಗಿ ಸರ್ಕಾರ ಚಿಂತನೆ ಮಾಡಬೇಕು. ನಿಮಗೆ ಆ ಪೊಲಿಟಿಕಲ್ ವಿಲ್ ಇದ್ದರೆ ಮೊದಲು ಅವನನ್ನು ಸಸ್ಪೆಂಡಾದರೂ ಮಾಡಿ. ನನಗೆ ಗೊತ್ತಿರುವಂತೆ ನಿಮಗೆ ಆ ಶಕ್ತಿ ಇಲ್ಲ ಅಂತ ಭಾವಿಸಿಕೊಂಡಿದ್ದೇನೆ.

ಶ್ರೀ ಸಿ ಎಸ್ ಪುಟ್ಟೇಗೌಡ : ಮಂತ್ರಿಗಳು ಆಗುತ್ತೋ ಆಗಲ್ಲವೋ ದಯಮಾಡಿ ಹೇಳಬೇಕು. ಶಿಡ್ಲಘಟ್ಟಕ್ಕೆ ಹೋಗಿ ಯಾವನೋ ಎರಡನೇ ದರ್ಜೆ ಗುಮಾಸ್ತನನ್ನು ಸಸ್ಪೆಂಡೋ ಡಿಸ್ಮಿಸ್ ಮಾಡೋಕೋ ಈ ಸರ್ಕಾರ ಇಟ್ಟುಕೊಂಡು ಸಣ್ಣ ಪುಟ್ಟ ನೌಕರರನ್ನು ಹಿಡಿದುಕೊಂಡು. ಯಾರು ಇಂಥ ದೇಶವನ್ನೇ ತಿನ್ನುವಂತಹ ಹಡಗುಗಳನ್ನೆಲ್ಲ ಹಿಡಿಯದೇ ಇದ್ದರೆ ಯಾಕ್ರೀ ಸರ್ಕಾರ ಅಂತ ಜನರಿಗೆಲ್ಲ ದೊಡ್ಡ ಮನುಷ್ಯರು ಅಂತ ಇಲ್ಲಿ ಬಂದು ಕೂತುಕೊಳ್ಳಬೇಕು? ದಯಮಾಡಿ ಉತ್ತರ ಹೇಳಬೇಕು ಚನ್ನಿಗಪ್ಪನವರೇ. ನಿಮ್ಮ ಕೈಲಿ ಆಗುತ್ತದಾ ಇಲ್ಲವಾ?

ಶ್ರೀ ಎ.ಟಿ ರಾಮಸ್ವಾಮಿ : ಇಲಾಖಾ ಮಟ್ಟದಲ್ಲಿ ತನಿಖೆ ಮಾಡುತ್ತೇವೆ ಅಂದಿದ್ದೀರಿ. ಯಾಕೆ ಇಷ್ಟು ದಿವಸದಲ್ಲಿ ಮಾಡಿಸಲಿಲ್ಲ ? ನಾಚಿಕೆಗೇಡು.

ಶ್ರೀ ಸಿ ಎಸ್ ಪುಟ್ಟೇಗೌಡ : ರೇಷ್ಮೆ ಸೀರೆ ಗಿಫ್ಟ್ ತಗೊಂಡು ಸುಳ್ಳು ಹೇಳೋರಿಗೆ ಒಂದು ಕಾನೂನು ಈ ದೇಶದಲ್ಲಿ ಈ ರಾಜ್ಯದಲ್ಲಿ. ಈ ಕ್ಯಾರಕಾನಿ ಸೀರೆ ಉಡುವವರಿಗೆ ಒಂದು ನ್ಯಾಯನಾ ಸ್ವಾಮಿ ? ಹಾಗಾದರೆ ರೇಷ್ಮೆ ಸೀರೆ ಕದಿಯೋರಿಗೆ ಗಿಫ್ಟು ಮೋಸ ಮಾಡುವವರಿಗೇನು ಯಾವುದು ಶಿಕ್ಷೆ ಇಲ್ಲ ಅನ್ನುವುದಾದರೆ ನಾವು ಯಾಕೆ ಇಲ್ಲಿ ಕೂತು ಚರ್ಚೆ ಮಾಡಬೇಕು?

ಶ್ರೀ ಜೆ.ಸಿ. ಮಾಧುಸ್ವಾಮಿ : ಯಾರು ಮ್ಯಾನೇಜಿಂಗ್ ಡೈರೆಕ್ಟರ್. ಯಾರು ಮ್ಯಾನೇಜರ್ ಅಕೌಂಟ್ಸ್. ಆ ಘನತೆವೆತ್ತವರ ಹೆಸರು ಹೇಳಿ. ನಮಗೆ ಅರ್ಥವಾಗಲಿ.

ಶ್ರೀ ಸಿ ಚೆನ್ನಿಗಪ್ಪ : (ಮಾನ್ಯ ರೇಷ್ಮೆ ಸಚಿವರು) : ಅಧ್ಯಕ್ಷರೆ ಮಾನ್ಯ ಸದಸ್ಯರು ಅದರಲ್ಲೂ ಹಿರಿಯ ಸದಸ್ಯ ಪುಟ್ಟೇಗೌಡರು ಗುರುತರವಾದ ಒಂದು ಆಪಾದನೆಯನ್ನು ನಮ್ಮ ಇಲಾಖೆಯ ಕೆಎಸ್ಐಸಿಯ ಹಿಂದಿನ ಡೈರೆಕ್ಟರ್ ಮೇಲೆ. ವ್ಯವಸ್ಥಾಪಕರು. ಉಪ ವ್ಯವಸ್ಥಾಪಕರು ಮತ್ತು ಸೇಲ್ಸ್ ಆಫೀಸರ್ ಮೇಲೆ ಇವತ್ತು ಮಾಡಿದ್ದಾರೆ. ಅದನ್ನು ನಮ್ಮ ಆಂತರಿಕ ಲೆಕ್ಕ ಪರಿಶೋಧನಾ ಇಲಾಖೆಯಿಂದ ಹಿಂದೆ ಜೂನ್ ಒಂದರಿಂದ ಸೆಪ್ಟೆಂಬರ್ 2003ರವರೆಗೂ ಏನು ಅಧಿಕಾರಿಗಳಿದ್ದರು ಅಂದು ಅವರು ಮಾಡಿರುವ ಟಿಎ ಬಿಲ್ ಆಗಬಹುದು. ಹೋಟೆಲ್‌ನಲ್ಲಿ ವಾಸ್ತವ್ಯ ಇರುವ ಬಿಲ್ ಆಗಬಹುದು. ಅಥವಾ ಗಿಫ್ಟ್ ಕೊಡುವ ಸ್ಯಾರೀಸ್ ಆಗಬಹುದು. ಅಲ್ಲೇನು ಇಲ್ಲ ಎಂಬ ಒಂದು ಆಪಾದನೆ ಏನೆ ಇತ್ತು. ಅದನ್ನು ಪರಿಶೀಲನೆ ಮಾಡಲಾಗಿದೆ. ಅದು ಮೇಲುನೋಟಕ್ಕೆ ಸಾಬೀತಾಗಿದೆ. ಆದರೆ, ಅದು ಸಾಬೀತಾದ ಮೇಲೆ ಅದನ್ನು ನಾನು ಮಂತ್ರಿಯಾದ ಕೇವಲ ಮೂರು ದಿವಸದಲ್ಲಿ ಕೆಲವು ಪತ್ರಕರ್ತರು ಬಂದು ನಮ್ಮನ್ನು ಕಛೇರಿಯಲ್ಲಿ ಕೇಳಿದರು. ನಮ್ಮ ಹತ್ತಿರ ರೆಕಾರ್ಡ್ಸ್ ಇದೆ, ನೀವೇನು ಕ್ರಮವನ್ನು ತೆಗೆದುಕೊಳ್ಳುತ್ತೀರಿ. ನಿಮ್ಮಲ್ಲಿ ಅನೇಕ ಜನ ಅಧಿಕಾರಿಗಳು ಭ್ರಷ್ಟಾಚಾರ ಮಾಡಿದ್ದಾರೆ ಎಂದು ಪತ್ರಕರ್ತರು ಕೇಳಿದಾಗ ನಾನು ಉತ್ತರವನ್ನು ಹೇಳಿದೆ. ಆ ಫೈಲನ್ನು ತರಿಸುತ್ತೇನೆ, ಹಾಗೇನಾದರೂ ಆದರೆ ನಮ್ಮ ಧರ್ಮಸಿಂಗ್‌ರವರ ಸರ್ಕಾರ ಯಾರಿಗೂ ಸ್ಪೇರ್ ಮಾಡುವುದಿಲ್ಲವೆನ್ನುವ ಮಾತನ್ನು ಹೇಳಿದ್ದೇವೆ. ಹಿಂದಿನ ಎಂ.ಡಿ.ಯವರ ಹೆಸರು ಹಾಲಪ್ಪನವರು. ಅವರ ಹಿಂದೆ ಏನು ಮಾಡಿದ್ದರು. ಅದರ ಬಗ್ಗೆ ಆಂತರಿಕ ಲೆಕ್ಕ ಪರಿಶೋಧಕರು ಅದನ್ನು ಪರಿಶೀಲನೆಯನ್ನು ಮಾಡಿ ಅವೆಲ್ಲವೂ ತಪ್ಪು ಸುಳ್ಳು ಬಿಲ್ ಇದು. ಡೂಪ್ಲಿಕೇಟ್ ಬಿಲ್ ಇದು. ಹೋಟೆಲ್‌ನಲ್ಲಿ ಅವರು ವಾಸ್ತವ್ಯ ಮಾಡಿರಲಿಲ್ಲ. ವಿಮಾನದಲ್ಲಿ ಅವರು ಪ್ರವಾಸ ಮಾಡಿರಲಿಲ್ಲ. ಎಂದು ಅವರು ಸ್ಪಷ್ಟವಾಗಿ ತನಿಖೆಯಲ್ಲಿ ವಿವರಿಸಿ ಅದು ಮೇಲುನೋಟಕ್ಕೆ ಸಾಬೀತಾಗಿದೆ.

ಶ್ರೀ ಸಿ.ಎಸ್ ಪುಟ್ಟೇಗೌಡ : ಮಾನ್ಯ ಅಧ್ಯಕ್ಷರೆ. 2001 ರಿಂದ 2003 ರವರೆಗೆ ಆಗಿರುವ ಇಂಥ ವಿಮಾನದ ಕಳ್ಳರನ್ನು ರೇಷ್ಮೆ ಸೀರೆ ಕಳ್ಳರನ್ನೆಲ್ಲಾ ತಿರುಗಾಡಿಕೊಂಡು ಬಿಟ್ಟು ರಾಜ್ಯದಲ್ಲಿ ಇಂಥವರನ್ನೇ ಆಡಳಿತ ನಡೆಸುವುದಕ್ಕೆ ಬಿಟ್ಟುಕೊಂಡು ಯಾರೋ ಹೊಟ್ಟೆಗಿಲ್ಲದೆ 4 ಕಾಯಿಗಳನ್ನು ಯಾರದೋ ತೋಟದಲ್ಲಿ ತಂದವರಲ್ಲ ಹಳ್ಳಿಯಲ್ಲಿ ಜೈಲಿನಲ್ಲಿದ್ದಾರೆ. ಸ್ವಾಮಿ. ಇನ್ನು ಇದನ್ನು ಹೇಳಿಕೊಂಡು ಕುಳಿತುಕೊಳ್ಳುವುದು ಅರ್ಥವಿದೆಯಾ? ಏನು ಮಾಡುತ್ತೀರಿ ಎಂದು ಸ್ಪಷ್ಟವಾಗಿ ಹೇಳಿ. ಇಲ್ಲದಿದ್ದರೆ ಸರ್ಕಾರಕ್ಕೆ ಯೋಗ್ಯತೆ ಇಲ್ಲ ಎಂದು ಹೇಳಿ. ಏಕೆ ಇಂಥವರನ್ನು ಬಿಟ್ಟುಕೊಂಡು ಸುಮ್ಮನೆ ಕೂಡುತ್ತೀರಿ?

ಶ್ರೀ ಸಿ.ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಪುಟ್ಟೇಗೌಡರು ಪ್ರಾಮಾಣಿಕವಾಗಿ ಕೆಲಸ ಮಾಡಿ ಅನ್ಯಾಯವನ್ನು ಸಹಿಸಲಾರದ ಒಬ್ಬ ರಾಜಕಾರಣಿ ಅವರು ಎಂದು ಎಲ್ಲರಿಗೂ ಗೊತ್ತಿದೆ. ನಮ್ಮ ಮಾಧುಸ್ವಾಮಿಯವರೂ ಸಹ ಈ ವಿಚಾರದಲ್ಲಿ ಪ್ರಾಮಾಣಿಕರು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಸರ್ಕಾರ ಅದರಲ್ಲೂ ನಮ್ಮ ಇಲಾಖೆಯಲ್ಲಿ ಯಾರು ಹಣವನ್ನು ಹೊಡೆಯುತ್ತಾರೆ. ಅವರಿಗೆ ಅವಕಾಶ ಇಲ್ಲ. ಇದು ಹಿಂದೆ ಆಗಿರತಕ್ಕಂಥದ್ದು.

ಶ್ರೀ ಜಯಪ್ರಕಾಶ್ ಹೆಗಡೆ ; ಹಣವನ್ನು ಹೊಡೆದವರ ಹೆಸರನ್ನು ಹೇಳಿ.

ಒಬ್ಬ ಮಾನ್ಯ ಸದಸ್ಯರು : ಸಾಬೀತು ಆಗಿರುವವರನ್ನು ಮೊದಲು ಸಸ್ಪೆಂಡ್ ಮಾಡಿ ಸ್ವಾಮಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ಹೆಸರು ಹೇಳಿ ಎಂದರೆ ಹೇಳುತ್ತಿಲ್ಲ.

ಅಧ್ಯಕ್ಷರು ; ಎಲ್ಲರೂ ಈ ರೀತಿ ಕೇಳಿದರೆ ಅವರೇನು ಹೇಳಬೇಕು ?

ಶ್ರೀ ಎ.ಟಿ.ರಾಮಸ್ವಾಮಿ : ಸಾಬೀತು ಆಗಿರುವವರನ್ನು ಸಸ್ಪೆಂಡ್ ಮಾಡಿ ಮಂತ್ರಿಗಳೇ. ಕೋರ್ಟಿನಲ್ಲಿ ವಾಸ್ತವ್ಯ ಹೂಡಿಲ್ಲ. ಸುಳ್ಳು ದಾಖಲೆಗಳನ್ನು ಕೊಟ್ಟು ಎಂ.ಡಿ.ಯವರು ಹಣವನ್ನು ಡ್ರಾ ಮಾಡಿದ್ದಾರೆ ಎಂದು ಹೇಳಿ, ಸುಳ್ಳು ದಾಖಲೆಗಳನ್ನು ಕೊಟ್ಟು ಕೊಟ್ಟಿದ್ದಾರೆಂದ ಮೇಲೆ ಇಷ್ಟು ದಿವಸ ಏಕೆ ಸುಮ್ಮನಿದ್ದೀರಿ? ಅವರ ಮೇಲೆ ಏಕೆ ಕ್ರಿಮಿನಲ್ ಕೇಸನ್ನು ನೀವು ಬುಕ್ ಮಾಡಿಸಲಿಲ್ಲ ? ಅವರನ್ನು ಸಸ್ಪೆಂಡ್ ಆದರೂ ಮಾಡಲಿಲ್ಲ. ಡಿಸ್‌ಮಿಸ್ ಮಾಡಲಿಕ್ಕೆ ಆಗುವುದಿಲ್ಲ. ನಮಗೆ ಗೊತ್ತಿದೆ.

ಶ್ರೀ ಸಿ.ಎಸ್. ಪುಟ್ಟೇಗೌಡ : – ಅವರನ್ನು ಗಣರಾಜ್ಯೋತ್ಸವ ಪ್ರಶಸ್ತಿ ಕೊಡುವುದಕ್ಕೆ ಅವರನ್ನು ಇಟ್ಟುಕೊಂಡಿರಬಹುದು ಎಂದು ನನಗನಿಸುತ್ತದೆ.

(ಗೊಂದಲ)

ಅಧ್ಯಕ್ಷರು : ಏನಾದರೂ ಹೇಳಲಿ ತಡೆಯಿರಿ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮಸ್ವಾಮಿಯವರು ದಯಮಾಡಿ ಕುಳಿತುಕೊಳ್ಳಬೇಕು. ಇದರಲ್ಲಿ ಭಾಗಿಯಾದಂಥ ಅಧಿಕಾರಿಗಳು ಹಾಲಪ್ಪನವರು ಆಗಿನ ಎಂ.ಡಿ.ಆಗಿದ್ದರು. ಡಿ.ವೈ.ಕಾಟು ಅವರು ವ್ಯವಸ್ಥಾಪಕ ಹಣ ಮತ್ತು ಲೆಕ್ಕ, ಇನ್ನೊಬ್ಬರು ಐತಾಳ್ ಎಂದು ಉಪವ್ಯವಸ್ಥಾಪಕರಿದ್ದರು. ಹೆಚ್.ಎಲ್.ಭೀಮಪ್ಪ ಮಹಾ ವ್ಯವಸ್ಥಾಪಕರು ಶ್ರೀನಿವಾಸ ಮತ್ತು ಶ್ರೀಮತಿ ಉಷಾ

ಅವರು ಅಲ್ಲಿ ವ್ಯವಹಾರದಲ್ಲಿ ಇರಲಿಲ್ಲವಾದ್ದರಿಂದ ಅವರನ್ನು ಮೇಲುನೋಟಕ್ಕೆ ಸಾಬೀತಾಗಿಲ್ಲವೆಂದು ಅವರನ್ನು ಖುಲಾಷೆ ಮಾಡಿದ್ದಾರೆ. 4 ಜನರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಇಬ್ಬರ ಮೇಲೆ ಮಾತ್ರ ಆರೋಪ ಸಾಬೀತಾಗಿದೆ ಎಂದು ಹೇಳಿದ್ದಾರೆ. ಎಂ.ಡಿ.ಯವರ ಬಗ್ಗೆ ಅವರು ಐಎಎಸ್ ಅಧಿಕಾರಿಯಾದ್ದರಿಂದ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುವುದು ಎಂದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಫೈಲನ್ನು ಕಳುಹಿಸಬೇಕೆಂದು ಕಾನೂನು ಇದೆ. ಮುಖ್ಯಕಾರ್ಯದರ್ಶಿ, ಡಿಪಿಎಆರ್‌ಗೆ ಕಳುಹಿಸಬೇಕು. ಆ ಪ್ರಕಾರ ನಾನು ಅದನ್ನು ಜನವರಿ 20 ನೇ ತಾರೀಖು ಇದರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿ ನಾನು ಡಿಪಿಎಆರ್ ಇಲಾಖೆಗೆ ನಾನು ಶಿಫಾರಸ್ ಮಾಡಿ ಕಳುಹಿಸಿಕೊಟ್ಟಿದ್ದೇನೆ. ಅದು ಈಗ ಪರಿಶೀಲನೆಯಲ್ಲಿದೆ. ನಮ್ಮ ಸರ್ಕಾರ ಅವರಿಗೆ ಮುಲಾಜು ತೋರಿಸದೆ ಯಾವುದೇ ಕಾರಣಕ್ಕೂ ತಪ್ಪಿತಸ್ಥರನ್ನು ಕ್ಷಮಿಸದೆ ಕ್ರಮ ತೆಗೆದುಕೊಳುತ್ತದೆ. ಅದಕ್ಕೆ ಕಾಲಾವಕಾಶ ಬೇಕು. ಮಾನ್ಯ ಪುಟ್ಟೇಗೌಡರೇ, ಇದನ್ನು ತಕ್ಷಣವೇ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

(ಗೊಂದಲ)

ಶ್ರೀ ಸಿ.ಎಸ್ ಪುಟ್ಟೇಗೌಡ : – ಮಾನ್ಯ ಅಧ್ಯಕ್ಷರೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಇದನ್ನು ಅವರ ಗಮನಕ್ಕೂ ಕೂಡ ತರುತ್ತೇನೆ. ಇಂಥವರನ್ನೆಲ್ಲಾ ಇಟ್ಟುಕೊಂಡು ಈ ಸರ್ಕಾರವನ್ನು ನಡೆಸುವುದಾದರೆ ಈ ಸರ್ಕಾರ ಜನಪರವಾದಂಥ ಸರ್ಕಾರವಲ್ಲ ಎಂದು ಹೇಳಬೇಕಾಗುತ್ತದೆ ಜನ ಬಾಯಿಬಿಟ್ಟು, ಅದಕ್ಕೆ ಅವಕಾಶವನ್ನು ಕೊಡಕೂಡದು. ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲೇಬೇಕು. ಮಾನ್ಯ ಮುಖ್ಯಮಂತ್ರಿಗಳು ಕೂಡ ಈ ಸದನದಲ್ಲಿರುವುದರಿಂದ ಅವರು ಕೂಡ ಇದರ ಬಗ್ಗೆ ಮುಂದೆ ಏನು ಮಾಡುತ್ತಾರೆ ಎನ್ನುವುದನ್ನು ದಯಮಾಡಿ ಗಮನವನ್ನು ಹರಿಸಬೇಕೆಂದು ಈ ಮೂಲಕ ನಾನು ಅವರಲ್ಲಿ ಮನವಿ ಮಾಡುತ್ತೇನೆ. ಮಾನ್ಯ ಚೆನ್ನಿಗಪ್ಪನವರು ಒಬ್ಬ ರೈತರ ಮಗ ಎಂದು ಹೇಳಿ ಏನು ಸುಧಾರಣೆ ಮಾಡುತ್ತಾರೆ ಎಂದು ಹೇಳಿ ಬಜೆಟನಲ್ಲಿ ಮೂವತ್ತು ಕೋಟಿ ರೂಪಾಯಿ ಕೊಟ್ಟು ಮಾನ್ಯ ಉಪ ಮುಖ್ಯಮಂತ್ರಿಗಳು ಈ ಸರ್ಕಾರದಲ್ಲಿ ಹೆಚ್ಚು ಶಕ್ತಿಯನ್ನು ಕೊಟ್ಟರೆ ಇಂಥವರು ತಿಂದುಕೊಳ್ಳುವುದಕ್ಕೆ ಇದ್ದಾರೆ. ಅದಕ್ಕೋಸ್ಕರ ದಯಮಾಡಿ ಆ ಇಲಾಖೆಯನ್ನು ಮುಚ್ಚಿ ಬಿಟ್ಟು ರೈತರಿಗೆ ಹೆಸರಿಗೆ ಸಬ್ಸಿಡಿ ಕೊಡುತ್ತೇವೆಂದು ಹೇಳಿ ಇವೆಲ್ಲಾ ನುಂಗಿಹಾಕುವುದು ತಪ್ಪುತ್ತದೆ ಎನ್ನತಕ್ಕ ಮನವಿಯನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು : ನೀವ್ಯಾಕೆ ಮಾನ್ಯ ಮುಖ್ಯ ಮಂತ್ರಿಗಳನ್ನು ಕನ್‌ಫ್ಯೂಸ್ ಮಾಡುತ್ತಿದ್ದೀರಿ ಎಂದು ನನಗೆ ಅರ್ಥವಾಗಲಿಲ್ಲ. ಎಲ್ಲರೂ ನಿಂತುಕೊಂಡು ಎಲ್ಲರೂ ಮಾತನಾಡುವುದು. ನಿಮಗೇನೆಂದರೆ ಉತ್ತರ ಬೇಕಿಲ್ಲ. ಉತ್ತರವನ್ನು ನೀವು ಅವರಿಂದ ತೆಗೆದುಕೊಳ್ಳುವುದಕ್ಕೆ ನೀವು ಸಿದ್ದರಾಗಿಲ್ಲ.

ಶ್ರೀ ಎ.ಟಿ.ರಾಮಸ್ವಾಮಿ : ಕ್ಷಮಿಸಿ, ಹಾಗೆ ಇಲ್ಲ. ಇದು ಗಂಭೀರವಾದ ವಿಷಯ. ಸುಳ್ಳು ದಾಖಲೆಗಳನ್ನು ಸೃಷ್ಟಿಮಾಡಿ ಅವರು ಹಣ ಪಡೆದುಕೊಂಡಿದ್ದಾರೆ. ಅದರ ಮೇಲೆ ಇವರ್ಯಾಕೆ ಕ್ರಿಮಿನಲ್ ಕೇಸನ್ನು ಬುಕ್ ಮಾಡುತ್ತಿಲ್ಲ. ಡಿಪಿಎಆರ್‌ನವರು ಕ್ರಮ ತೆಗೆದುಕೊಳ್ಳಲಿ. ಇವರ ಇಲಾಖೆಯವರು ಏಕೆ ಕ್ರಮವನ್ನು ತೆಗೆದುಕೊಂಡಿಲ್ಲ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು, ಅದನ್ನು ಸ್ಪಷ್ಟವಾಗಿ ನೀವೇನು ಕ್ರಮ ತೆಗೆದುಕೊಳ್ಳುತ್ತೀರಿ. ತೆಗೆದುಕೊಳ್ಳುತ್ತಿರಾ ಇಲ್ಲವಾ? ನಿಮ್ಮ ಕೈಯಲ್ಲಿ ಆಗುತ್ತದಾ ಇಲ್ಲವಾ ಎಂದು ಹೇಳಿ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಏನು ಇವತ್ತು ಮಾನ್ಯ ರಾಮಸ್ವಾಮಿಯವರು. ಪುಟ್ಟೇಗೌಡರು ಕೃಷ್ಣಪ್ಪನವರು ಕೇಳಿದ್ದಾರೆ, ನಾವೇನು ಇವತ್ತು ಹಿಂದೆ ಮಾಡಿದ ಅಪರಾಧ ಏನು ಇದೆ. ಅಕ್ರಮ ಏನಿದೆ. ತನಿಖೆಯಾಗಿದೆ. ಮೇಲುನೋಟಕ್ಕೆ ಸಾಬೀತಾಗಿದೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದ್ದೇವೆ. ಅವರು ಐಎಎಸ್ ಅಧಿಕಾರಿಯಾದ್ದರಿಂದ ನಾನು ಡಿಪಿಎಆರ್ ಇಲಾಖೆಗೆ ಜನವರಿ 20 ನೇ ತಾರೀಖಿನಲ್ಲಿ ಕಳುಹಿಸಿಕೊಟ್ಟಿದ್ದೇನೆ. ಮಿಕ್ಕವರಿಗೆ ಡೆಪ್ಯುಟಿ ಸೂಪರಿಂಟೆಂಡೆಂಟ್ ಅವರನ್ನು ಸೂಪರಿಂಟೆಂಡೆಂಟ್ ಅಕೌಂಟ್ಸ್ ಅವರನ್ನು ಅವರದು ಸಾಬೀತಾಗಿದೆ. ಅವರು ಶಾಮೀಲಾಗಿದ್ದಾರೆ ಎಂದು ಡಿಸ್‌ಮಿಸ್ ಆಗಿದೆ. ಇನ್ನಿಬ್ಬರನ್ನು ವಾರ್ನ್ ಮಾಡಿದ್ದಾರೆ. ಕ್ಲರ್ಕ್ ಮತ್ತು ಅಲ್ಲಿದ್ದ ಸ್ವಾಗತಕಾರರೆಲ್ಲ ಸಂಬಂಧ ಇಲ್ಲವೆಂದು ಅವರನ್ನು ಕೈಬಿಟ್ಟಿದ್ದಾರೆ. ಇದು ಆಗಿರುವ ವ್ಯವಹಾರ. ಆದರೆ ಮಾನ್ಯ ಅಧ್ಯಕ್ಷರೇ ಇವರೇನು ಕೇಳುತ್ತಾರೆ ಈಗಲೇ ಮಾಡಿಬಿಡಿ. ಕ್ರಿಮಿನಲ್ ಕೇಸ್ ಹಾಕಿಬಿಡಿ ಎಂದು ಹೇಳುತ್ತಾರೆ. ಅದಕ್ಕೆಲ್ಲಾ ಕಾನೂನು ಇದೆ. ಕಾನೂನು ಪ್ರಕಾರ ಆಗಬೇಕು. ಇವರು ಹೇಳಿದ ತಕ್ಷಣವೇ ಶಾಸಕರಾಗಿ ಕುಳಿತುಕೊಂಡ ತಕ್ಷಣ ಆಕ್ಷ್ಯನ್ ತೆಗೆದುಕೊಂಡು ಬಿಡಿ ಅಲ್ಲಿ ಕಾನೂನನ್ನು ಮಾಡಿದ್ದೀರಲ್ಲ. ಅದನ್ನು ಬ್ರೇಕ್ ಮಾಡುವುದಕ್ಕಾಗುತ್ತದೆಯೇ ? Is it possible to break the law ? Highly impossible. Sorry. ಪುಟ್ಟೇಗೌಡರು ಹಿರಿಯ ಸದಸ್ಯರು. ಆದ್ದರಿಂದ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ, ಏನು ಮಾಡಬೇಕೋ ಅದನ್ನು ಈ ಸರ್ಕಾರ ಮಾಡುತ್ತದೆ.

ಶ್ರೀ ಸಿ.ಎಸ್. ಪುಟ್ಟೇಗೌಡ ; ಖಂಡಿತವಾಗಿಯೂ ಹೇಳಬೇಕಾಗಿದೆ. ಮಾನ್ಯ ಚನ್ನಿಗಪ್ಪನವರು ಡಿಪಿಎಆರ್‌ಗೆ ಕಳುಹಿಸಿದ್ದೇವೆ, ಪರಿಶೀಲಿಸುತ್ತೇವೆ. ನೋಡುತ್ತೇವೆ, ಇವೆಲ್ಲಾ ಸಾಮಾನ್ಯವಾಗಿ 1947 ನೇ ಇಸವಿಯಿಂದ ಹೇಳುವಂಥ ಮಾತು.

(ಗೊಂದಲ)

ಅಧ್ಯಕ್ಷರು : ಮಾನ್ಯ ಶಂಕರಲಿಂಗೇಗೌಡರ ಪ್ರಶ್ನೆ ಸಂಖ್ಯೆ 180(2345) ಅನ್ನು ತಡೆಹಿಡಿಯಲಾಗಿದೆ.

1 ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2402

2 ಸದಸ್ಯರ ಹೆಸರು : ಶ್ರಿ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

3 ವಿಷಯ : ರೈತರಿಗೆ ಬೋನಸ್ ಹಣ ಬಿಡುಗಡೆ

4 ಉತ್ತರಿಸುವ ಸಚಿವರು : ಶೀ ಸಿ. ಚೆನ್ನಿಗಪ್ಪ (ರೇಷ್ಮೆ ಸಚಿವರು)

ಕ್ರ.ಸಂ. ಪ್ರಶ್ನೆ

ಅ. 2004–05ನೇ ಸಾಲಿನಲ್ಲಿ ರೇಷ್ಮೆ ಬೆಳೆಯುವ ರೈತರಿಗೆ ಬಾಕಿ ಕೊಡಬೇಕಾಗಿರುವ ಬೋನಸ್ ಹಣ ಎಷ್ಟು.

ಉತ್ತರ

2004–05ನೇ ಸಾಲಿನ ಜನವರಿ 2005 ರ ಅಂತ್ಯದವರೆಗೆ ರೂ.221.37 ಲಕ್ಷ ಬೋನಸ್ ಪಾವತಿಸಬೇಕಾಗಿದ್ದು, ಇದರಲ್ಲಿ ಅಕ್ಟೋಬರ್ ಅಂತ್ಯದವರೆಗಿನ ಬೋನಸ್ ಮೊತ್ತ ರೂ.173.81 ಲಕ್ಷಗಳನ್ನು ಬಿತ್ತನೆ ರೈತರಿಗೆ ಪಾವತಿಸಲಾಗಿದೆ. ನವೆಂಬರ್ ಡಿಸೆಂಬರ್ 2004 ಮತ್ತು ಜನವರಿ 2005 ಮಾಹೆಗಳ ಬೋನಸ್ ಮೊತ್ತ ರೂ. 47.56 ಲಕ್ಷಗಳಿಗೆ ಮಂಜೂರಾತಿ ನೀಡಲಾಗಿದೆ.

ಕ್ರ.ಸಂ. ಪ್ರಶ್ನೆ

ಆ. ಯಾವಾಗ ಬಾಕಿ ಹಣವನ್ನು ರೈತರಿಗೆ ಬಿಡುಗಡೆ ಮಾಡಲಾಗುವುದು (ವಿವರ ನೀಡುವುದು)

ಉತ್ತರ

ಜನವರಿ 2005ರ ಅಂತ್ಯದವರೆಗಿನ ಬೋನಸ್ ಮೊತ್ತವನ್ನು ಬಿತ್ತನೆ ಬೆಳೆಗಾರರಿಗೆ ಮಾರ್ಚ್ 31–3–2005 ರೊಳಗಾಗಿ ಪಾವತಿಸಲಾಗುವುದು.